# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ








ಸಂಪುಟ : 38 ಸಂಚಿಕೆ : 21 ಹೇಮಲಂಬಿ–ಜ್ಯೇಷ್ಠ ಕಲಿಯುಗಾಬ್ದ 5119 15–6–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ದೇಗುಲಗಳ ಹುಂಡಿಯಿಂದ ಸರ್ಕಾರದ ಬೊಕ್ಕಸಕ್ಕೆ

## ಹಿಂದೂ ಭಕ್ತರ ದಕ್ಷಿಣೆ ಬಳಕೆಯಾಗುತ್ತಿರುವುದೆಲ್ಲಿ? ಧಾರ್ಮಿಕ ದತ್ತಿ ಕಾನೂನಿನಿಂದ ಶೋಷಣೆಯಾಗುತ್ತಿವೆಯೇ ದೇವಸ್ಥಾನಗಳು?

ಸ್ವತಂತ್ರ ಭಾರತದ ಮೊದಲ ಪ್ರಧಾನಿ ನೆಹರೂ ಸರಕಾರ 1951ರಲ್ಲಿ ಹಿಂದೂ ರಿಲಿಜನ್ ಆ್ಯಂಡ್ ಚಾರಿಟೇಬಲ್ ಎಂಡೋಮೆಂಟ್ ಆ್ಯಕ್ಟ್ ಎಂಬ ಕಾಯಿದೆಯನ್ನು ಜಾರಿಗೊಳಿಸಿತು. ಇದರ ಹೂರಣ 1863 ಮತ್ತು 1890ರಲ್ಲಿ ಬ್ರಿಟಿಷರು ಜಾರಿಗೆ ತಂದಿದ್ದ ರಿಲೀಜಿಯಸ್ ಎಂಡೋಮೆಂಟ್ ಆಕ್ಟ್ ಮತ್ತು ಚಾರಿಟೇಬಲ್ ಎಂಡೋಮೆಂಟ್ ಆಕ್ಟ್ ಇವುಗಳಿಂದ ಪಡೆದದ್ದಾಗಿತ್ತು. ಹಿಂದೂ ದೇವಸ್ಥಾನ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುವ ಈ ಕಾಯ್ದೆಗಳ ಆಧಾರದ ಮೇಲೆಯೇ ಇಂದು ದೇಶದ ಅನೇಕ ರಾಜ್ಯಗಳಲ್ಲಿ ವಿವಿಧ ರೀತಿಯ ಕಾನೂನುಗಳು ಚಾಲ್ತಿಯಲ್ಲಿವೆ. ಕರ್ನಾಟಕದಲ್ಲಿ 'ಮುಜರಾಯಿ' ಎಂಬ ಪ್ರತ್ಯೇಕ ಇಲಾಖೆಯ ಅಡಿಯಲ್ಲಿ ಈ ಕಾನೂನುಗಳ ಪರಿಪಾಲನೆ ನಡೆಯುತ್ತದೆ. ಹಿಂದೂ ದೇವಸ್ಥಾನಗಳನ್ನು ಮತ್ತು ತತ್ಸಂಬಂಧಿ ಕಾರ್ಯಕಲಾಪಗಳನ್ನೂ ಒಂದು ವ್ಯವಸ್ಥೆಯಡಿಯಲ್ಲಿ ತರುಲೆಂದು ಜಾರಿಗೆ ಬಂದ ಕಾನೂನುಗಳು ದೇವಸ್ಥಾನಗಳಿಂದ ದೊರಕುವ ಆದಾಯವನ್ನು ಕೊಳ್ಳೆಹೊಡೆಯಲು ಮಾತ್ರ ದುರ್ಬಳಕೆಯಾಗುತ್ತಿವೆಯೇ? ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಐತಿಹಾಸಿಕವಾಗಿ ಹಿಂದೂರಾಜರು ದೇವಸ್ಥಾನ, ಮಠಮಾನ್ಯಗಳಿಗೆ ದಾನ–ದತ್ತಿಗಳನ್ನು ಕೊಟ್ಟಿದ್ದವರೇ ಹೊರತು ಅವುಗಳಿಂದ ಪ್ರತಿಫಲಾಪೇಕ್ಷೆ ಇಟ್ಟವರಲ್ಲ. ಆಯಾ ಗ್ರಾಮದ ದೇವಸ್ಥಾನಗಳ ಸಮಸ್ತ ಕಾರ್ಯಕಲಾಪಗಳನ್ನು ಊರಿನ ಪ್ರಮುಖರೇ ವಹಿಸಿಕೊಳ್ಳುತ್ತಿದ್ದರು. ರಾಜನ ಮಧ್ಯಸ್ಥಿಕೆಗೆ ಇಲ್ಲಿ ಅವಕಾಶವಿರಲಿಲ್ಲ. ಹೀಗಾಗಿ ದೇವಸ್ಥಾನದ ಉಂಬಳಿಯಲ್ಲಿರುವ ಹೊಲ, ತೋಟಗಳಂತಹ ಆಸ್ತಿಮೂಲಗಳಿಂದ ಬರುವ ಉತ್ಪನ್ನಗಳಿಂದಾಗಿ ದೇವಸ್ಥಾನವು ಸ್ವಾಯತ್ತ ಸಂಸ್ಥೆಯಾಗಿರಲು ಸಾಧ್ಯವಾಗಿತ್ತು. ದೇಗುಲದ ಭಕ್ತರ ವ್ಯವಸ್ಥೆಗಳಲ್ಲದೇ ಗ್ರಾಮದ ಮೂಲಭೂತ ಅವಶ್ಯಕತೆಗಳಾದ, ಗೋಶಾಲೆ, ಪಾಠಶಾಲೆ, ವೈದ್ಯಶಾಲೆ, ಸಮುದಾಯ ಭವನಗಳಂತಹ ಅನೇಕ ಸಾರ್ವಜನಿಕ



ವ್ಯವಸ್ಥೆಗಳನ್ನೂ ನಿರ್ವಹಿಸಲು ದೇವಸ್ಥಾನಗಳು ಸಕ್ಷಮವಾಗಿದ್ದವು. ಆದರೆ, ದೇಶದ ಆಳ್ವಿಕೆ ಮುಸ್ಲಿಂರಾಜರ ಕೈಸೇರುತ್ತಿದ್ದಂತೆಯೇ ಹಿಂದೂಗಳು ದೇವಸ್ಥಾನಕ್ಕೆ ಹೋಗದಂತೆ ನಿರ್ಬಂಧಿಸುವದಕ್ಕಿಂತ ದೇವರಿಗೆ ಸಂದ ಕಾಣಿಕೆಗಳಿಂದ ತಮ್ಮ ಖಜಾನೆ ತುಂಬಿಸುವಲ್ಲೇ ಹೆಚ್ಚಿನ ಲಾಭವಿದೆ ಎಂಬಲ್ಲಿಂದ ಮೊದಲ್ಗೊಂಡು, ನಂತರ ಬ್ರಿಟಿಷರು ಮುಂದುವರಿಸಿದ ಇಲಾಖೆಯೇ ಮುಜರಾಯಿ.

ಆಕ್ರಾಮಕ ಮುಸ್ಲಿಮರು ಮತ್ತು ಬ್ರಿಟಿಷರಿಗಿದ್ದ ಹಿಂದೂಗಳನ್ನು ಧಾರ್ಮಿಕವಾಗಿ ಹೀಗಳೆಯುವ ಮತ್ತು ಆರ್ಥಿಕವಾಗಿ ದೈನ್ಯತೆಗೆ ದೂಡುವ ದುರುದ್ದೇಶವೇನೋ ತಿಳಿಯಬಹುದು. ಆದರೆ, ಸ್ವಾತಂತ್ರ್ಯದ ನಂತರವೂ ಪ್ರಜಾತಾಂತ್ರಿಕವಾಗಿ ಚುನಾಯಿತಗೊಂಡ ಸರ್ಕಾರಗಳಿಗೂ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಕಾನೂನುಗಳ ಮೂಲಕ ನಿಯಂತ್ರಿಸುವ, ಅವುಗಳ ವ್ಯವಹಾರಗಳಲ್ಲಿ ಅನಾವಶ್ಯಕವಾಗಿ ಮೂಗುತೂರಿಸುವ ಕುತ್ಸಿತತೆ ಹಿಂದೂ ಬಾಹುಳ್ಯದ ಭಾರತದಲ್ಲೇ ಇರುವದು ಸಾಮಾನ್ಯರ ಅರಿವಿಗೆ ಮೀರಿದ್ದು. ಈ ಕಾಯಿದೆಯ ಪ್ರಕಾರ ಹಿಂದೂ ದೇವಸ್ಥಾನಗಳ ಆದಾಯವನ್ನು ತನ್ನಿಷ್ಟದಂತೆ ವಿನಿಯೋಗಿಸುವ ಹಕ್ಕೂ ಸೇರಿದಂತೆ ಅವುಗಳ ನಿರ್ವಹಣೆಯ ಜವಾಬ್ದಾರಿ ಮತ್ತು ಸಂಪೂರ್ಣ ಸ್ವಾಧೀನತೆಯ ಹಕ್ಕು ಇದೆಲ್ಲವೂ ರಾಜ್ಯಸರ್ಕಾರಕ್ಕೆ ಸೇರಿದ್ದು. ಇಂತಹ ಕಾನೂನು ಅನ್ವಯವಾಗುವುದು ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಮಾತ್ರ. ಉಳಿದ ಮತಗಳ ಧಾರ್ಮಿಕ ಸಂಸ್ಥೆಗಳು ಅಂದರೆ ಮಸೀದಿ, ಚರ್ಚ್, ಗುರುದ್ವಾರ ಇತ್ಯಾದಿಗಳು ಅಲ್ಪಸಂಖ್ಯಾತ ಸಂಸ್ಥೆಗಳು ಎಂದು ಕಾನೂನಿನಿಂದ ಸಂರಕ್ಷಿಸಲ್ಪಟ್ಟಿದ್ದು ಇವುಗಳಿಗೆ ನಿಯಂತ್ರಣ, ಆಡಳಿತ ಅಥವಾ ಆರ್ಥಿಕ ವಿಷಯದಲ್ಲಿ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲ.

**ಉದಾಹರಣೆಗಾಗಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದ ಸರ್ಕಾರಿ ದಾಖಲೆಯಂತೆ ರಾಜ್ಯದ ಕೆಲವು ಪ್ರಮುಖ ದೇವಸ್ಥಾನಗಳಿಂದ ಸರ್ಕಾರಕ್ಕಾದ ಆದಾಯ ಮತ್ತು ಸರ್ಕಾರದಿಂದ ಬಿಡುಗಡೆ/ಖರ್ಚು ಮಾಡಿದ ವಿವರ:**

| ದೇವಸ್ಥಾನ | ವರ್ಷ | ಆದಾಯ(ರೂಗಳಲ್ಲಿ) | ದೇವಾಲಯಕ್ಕೆ ಸರ್ಕಾರದಿಂದ ಮಾಡಿರುವ ಖರ್ಚು(ರೂಗಳಲ್ಲಿ) |
|---|---|---|---|
| ಪ್ರಸನ್ನ ವೀರಾಂಜನೇಯ ದೇವಸ್ಥಾನ, ಮಹಾಲಕ್ಷ್ಮಿಪುರ, ಬೆಂಗಳೂರು | 2014–15 | 1,74,73,840 | ಸರ್ಕಾರದಿಂದ ಯಾವುದೇ ಖರ್ಚು ಮಾಡಿಲ್ಲ. |
| | 2015–16 | 1,67,47,472 | |
| | 2016–17 | 1,76,35,228 | |
| ರೇಣುಕಾ ಯಲ್ಲಮ್ಮ ದೇವಾಲಯ, ಸವದತ್ತಿ, ಬೆಳಗಾವಿ | 2014–15 | 12,67,87,385.89 | ಸರ್ಕಾರದಿಂದ ಯಾವುದೇ ಖರ್ಚು ಮಾಡಿಲ್ಲ. |
| | 2015–16 | 16,63,69,430.11 | |
| | 2016–17 | 18,78,62,619.58 | |
| ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು | 2014–15 | 31,21,24946.27 | 68,510.00 |
| | 2015–16 | 39,13,38,407.59 | 68,510.00 |
| | 2016–17 | 44,26,03,967.09 | 68,510.00 |
| ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿ ಬೆಟ್ಟ, ಮೈಸೂರು | 2014–15 | 18,33,69,828 | ಸರ್ಕಾರದಿಂದ ಯಾವುದೇ ಹಣ ಬಿಡುಗಡೆ ಅಥವಾ ಖರ್ಚು ಮಾಡಿರುವುದಿಲ್ಲ. |
| | 2015–16 | 21,74,00,250 | |
| | 2016–17 | 24,09,53,742 | |

ಇದೇ ಕಾನೂನಿನಡಿಯಲ್ಲಿ ಸರ್ಕಾರಗಳು ಹಿಂದೂಧಾರ್ಮಿಕ ಸಂಸ್ಥೆಗಳನ್ನು ನಿರ್ವಹಿಸುವ ಬಗೆ ಹೇಗಿದೆ ನೋಡಿ. ಮುಜರಾಯಿ ಕಾಯ್ದೆ ಜಾರಿಯಾದ ಹೊಸತರಲ್ಲೇ ಆಂಧ್ರಪ್ರದೇಶ ಸರ್ಕಾರ ರಾಜ್ಯದ ಸುಮಾರು 34ಸಾವಿರ ದೇವಸ್ಥಾನಗಳನ್ನು ತನ್ನ ತೆಕ್ಕೆಗೆ ತಂದುಕೊಂಡಿತು. ಆಂಧ್ರದ ಮುಜರಾಯಿ ಇಲಾಖೆ ತನ್ನ ಆಡಳಿತದಲ್ಲಿರುವ ಎಲ್ಲಾ ದೇವಸ್ಥಾನಗಳಿಂದ ಬಂದ ದುಡ್ಡಲ್ಲಿ ಮಾತ್ರ 18% ರಷ್ಟು ಹಣವನ್ನು ಹಿಂದೂ ಧಾರ್ಮಿಕ ಕಾರ್ಯಕ್ಕೆ ವ್ಯಯಿಸಿ 82%ರಷ್ಟನ್ನು ಉಳಿದ ಕೆಲಸಗಳಿಗೆ ಬಳಸಿಕೊ0ಡಿತು. ಉದಾಹರಣೆಗೆ ತಿರುಪತಿಯ ವಾರ್ಷಿಕ ಆದಾಯ 3,500 ಕೋಟಿ ರೂಪಾಯಿಗಳು. ಇದರಲ್ಲಿ ಸರ್ಕಾರ ದೇವಸ್ಥಾನಗಳಿಗೆ ಮರಳಿಸಿದ್ದು 7% ಕ್ಕಿಂತಲೂ ಕಡಿಮೆ. ಮಹಾರಾಷ್ಟ್ರ, ಒರಿಸ್ಸಾ, ತಮಿಳುನಾಡು ಮತ್ತು ಕರ್ನಾಟಕ ಮೊದಲಾದ ರಾಜ್ಯಗಳು ಕೂಡ ಈ ಕಾನೂನಿನ ಲಾಭಪಡೆಯಲು ಹಿಂದೆ ಬೀಳಲಿಲ್ಲ.

1997ರಲ್ಲಿ ಕರ್ನಾಟಕ ಸರ್ಕಾರ ಜಾರಿಗೊಳಿಸಿದ ಮುಜುರಾಯಿ ಕಾನೂನಿನನ್ವಯ ದೇವಸ್ಥಾನಗಳ ಅಧಿಕಾರಿಗಳು, ಅರ್ಚಕರು, ಕೆಲಸಗಾರ, ಪೂಜಾರಿಗಳನ್ನು ನೇಮಿಸುವ, ಅವರಿಗೆ ಕೊಡಬೇಕಾದ ಸಂಬಳದ ಹಕ್ಕನ್ನೂ ತನ್ನ ಹೆಸರಿಗೇ ಬರೆದುಕೊಂಡಿತು. ವರ್ಷ97–98 ರಲ್ಲಿ ರಾಜ್ಯದ ದೇವಸ್ಥಾನಗಳಿಂದ ಸರ್ಕಾರದ ಖಜಾನೆ ಸೇರಿದ ಹಣ 59 ಕೋಟಿ. ಮುಂದಿನ ಐದು ವರ್ಷಗಳಲ್ಲಿ ಈ ಮೊತ್ತ 80 ಕೋಟಿ ರೂಪಾಯಿಯಷ್ಟು ಏರಿತು. ಆದರೆ, ಅದೇ ಐದು ವರ್ಷಗಳಲ್ಲಿ ಸರ್ಕಾರದಿಂದ ದೇವಸ್ಥಾನಗಳಿಗೆ ಸಿಕ್ಕ ನಿರ್ವಹಣಾ ವೆಚ್ಚ 16.5 ಕೋಟಿಯಿಂದ 7.1 ಕೋಟಿಗೆ ಇಳಿಯಿತು. ಮತ್ತು ಅದೇ ವರ್ಷಗಳಲ್ಲಿ ಸರ್ಕಾರ ಮುಸಲ್ಮಾನರ ಹಜ್ ಯಾತ್ರೆ, ಮಸೀದಿ, ಮದರಸಾಗಳಿಗೆಂದೆ ಖರ್ಚು ಮಾಡುವ ಹಣ 14.25 ರಿಂದ 58 ಕೋಟಿಗಳಿಗೆ ಏರಿತು.

**ಕಾಶಿ ಹಿಂದೂ ವಿಶ್ವವಿದ್ಯಾಲಯ, ತಿರುಮಲ ವಿಶ್ವಸ್ಥಮಂಡಳಿ ಕಾಲೇಜುಗಳಂತಹ ಅನೇಕ ಹಿಂದೂ ಶೈಕ್ಷಣಿಕ ಸಂಸ್ಥೆಗಳು ತಮ್ಮ ಉಚ್ಚಸ್ತರದ ಗುಣಮಟ್ಟತೆಗೆ ದೇಶದಲ್ಲೇ ಹೆಸರುವಾಸಿಯಾದ ಕಾಲವಿತ್ತು. ಆದರೆ, ಕೆಲಸಮಯದಲ್ಲೇ ಈ ಜಾಗಕ್ಕೆ ಸಂತ ಜೋಸೆಫ್, ಸಂತ ಝೇವಿಯರ್, ಸಿಎಂಸಿ, ಜೆ.ಬಿ.ಪೆಟಿಟ್ ನಂತಹ ಅಲ್ಪಸಂಖ್ಯಾಕರ ಸಂಸ್ಥೆಗಳು ಬಂದು ಕುಳಿತವು. ಇದಕ್ಕೆ ಕಾರಣ ಅಲ್ಪಸಂಖ್ಯಾಕರ ಶೈಕ್ಷಣಿಕ ಸಂಸ್ಥೆಗಳಿಗೆ ಅವರದ್ದೇ ಧಾರ್ಮಿಕ ಸಂಸ್ಥೆಗಳಿಂದ ದೊರಕುವ ಅಪಾರ ಸವಲತ್ತು ಮತ್ತು ಸರ್ಕಾರಿ ಸಹಾಯಧನ. ಅದೇ ಹೊತ್ತಿಗೆ ಹಿಂದೂ ಶೈಕ್ಷಣಿಕ ಸಂಸ್ಥೆಗಳಿಗೆ ಹಣಕಾಸಿನ ನೆರವು ನೀಡಲು ನಮ್ಮ ಧಾರ್ಮಿಕ ಸಂಸ್ಥೆಗಳನ್ನು ಅಸಮರ್ಥಗೊಳಿಸಿರುವ ಸರ್ಕಾರದ ಹಿಡಿತ.**

ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ರಾಜ್ಯಸರ್ಕಾರ ತನ್ನ ಹೊಸ ನಿಯಮಾವಳಿಯಂತೆ ತನ್ನ ಅಧಿಕಾರವ್ಯಾಪ್ತಿಯ 34,650 ದೇವಸ್ಥಾನಗಳಲ್ಲದೆ ಖಾಸಗಿ ಒಡೆತನದಲ್ಲಿರುವ ಮಂದಿರಗಳು ಮತ್ತು ವಿಶ್ವಸ್ಥ ಮಂಡಳಿಗಳನ್ನು ಹೊಂದಿರುವ ದೇವಾಲಯಗಳೂ ಸಹ ಸರ್ಕಾರಕ್ಕೆ ಕನಿಷ್ಠ ತೆರಿಗೆಯನ್ನು ಕಟ್ಟಲೇಬೇಕು. ತಪ್ಪಿದಲ್ಲಿ ಆಯಾ ವಿಶ್ವಸ್ಥ ಮಂಡಳಿಗಳ ಸದಸ್ಯರುಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬಹುದು. ಪ್ರಸ್ತುತ ಕರ್ನಾಟಕ ಸರ್ಕಾರದ ಅಧೀನದಲ್ಲಿ ಸುಮಾರು 2.5 ಲಕ್ಷದಷ್ಟು ದೇವಸ್ಥಾನಗಳಿವೆ. ಆದರೆ ಆಳರಸರ ಸತತ ದುರ್ಲಕ್ಷ್ಯದಿಂದಾಗಿ ಬರುವ 5 ವರ್ಷಗಳಲ್ಲೇ ಸುಮಾರು 50

- ಹಿಂದೂಮಂದಿರಗಳು ತಮಗೆ ದೊರೆತ ದಾನದತ್ತಿಗಳ ಮೇಲೆ ಸರ್ಕಾರಕ್ಕೆ ತೆರಿಗೆಕಟ್ಟಲೇಬೇಕು. ಆದರೆ, ಇವುಗಳ ಹಣಕಾಸು ವ್ಯವಹಾರಗಳ ಸಂಪೂರ್ಣ ಸ್ವಾಮಿತ್ವ ಮಾತ್ರ ಸರ್ಕಾರದ್ದು.
- ಮತೀಯ ಅಲ್ಪಸಂಖ್ಯಾತ ಸಂಸ್ಥೆಗಳು ತಮಗೆ ದೊರೆತ ದಾನಗಳ ಮೇಲೆ ಸರ್ಕಾರಕ್ಕೆ ಯಾವುದೇ ತೆರಿಗೆಕೊಡಬೇಕಿಲ್ಲ. ಅಷ್ಟೇ ಅಲ್ಲದೆ ಇವುಗಳ ಹಣಕಾಸಿನ ವ್ಯವಹಾರಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಿಲ್ಲ.
- ಹಿಂದುಯೇತರ ಶಿಕ್ಷಣಸಂಸ್ಥೆಗಳ ನಿರ್ವಹಣೆಯಲ್ಲಿ ಸರ್ಕಾರಕ್ಕೆ ಯಾವುದೇ ಪಾತ್ರವಿಲ್ಲ ಆದರೆ ಹಿಂದೂ ಶಿಕ್ಷಣ ಸಂಸ್ಥೆಗಳ ನಿರ್ವಹಣೆಯಲ್ಲಿ ಸರ್ಕಾರ ತನ್ನ ಹಕ್ಕು ನಡೆಸಬಹುದು.
- ಹಿಂದುಗಳಿಗೆ ತಮ್ಮ ಧಾರ್ಮಿಕ ಸಂಸ್ಥೆಗಳ ಆಡಳಿತದ ವಿಷಯದಲ್ಲಿಯೂ ಸರ್ಕಾರ ಮೂಗುತೂರಿಸಬಹುದು. ಆದರೆ ಮತೀಯ ಅಲ್ಪಸಂಖ್ಯಾತರ ಧಾರ್ಮಿಕಸಂಸ್ಥೆಗಳು ಆಡಳಿತದ ವಿಷಯದಲ್ಲಿ ಸಂಪೂರ್ಣ ಸ್ವತಂತ್ರ.

ಸಾವಿರ ದೇವಸ್ಥಾನಗಳು ಬಾಗಿಲು ಮುಚ್ಚವು ಹಂತಕ್ಕೆ ಬರಲಿವೆ. ಸಂಪೂರ್ಣ ದೇಶದಲ್ಲೇ ಹೆಚ್ಚು ದೇವಸ್ಥಾನಗಳನ್ನು ಹೊಂದಿರುವ ರಾಜ್ಯಗಳಲ್ಲಿ 4ನೆಯ ಸ್ಥಾನ ಕರ್ನಾಟಕದ್ದು ಆದರೆ ಬಹುತೇಕ ದೇವಸ್ಥಾನಗಳಿಗೆ ತಮ್ಮ ಅಸ್ತಿತ್ವವನ್ನುಳಿಸಿಕೊಳ್ಳಲು ಸರ್ಕಾರದ ನೆರವು ಇಂದು ತುರ್ತಾಗಿ ಬೇಕಿದೆ.

ಹಾಗಾದರೆ ಈ ಎಲ್ಲ ಕಾನೂನುಗಳ ದುರ್ಬಳಕೆಯಿಂದ ಹಿಂದೂಮಂದಿರ, ದೇಗುಲಗಳಿಗೆ ಉಳಿವಿಲ್ಲವೇ? ಸರ್ಕಾರದ ನಿಯಂತ್ರಣಕ್ಕೆ ಅಲ್ಪಸಂಖ್ಯಾಕರ ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳು ಸಿಗದಂತೆ ಮಾಡುವದು ನಮ್ಮ ದೇಶದ ಸಂವಿಧಾನ ಅವರಿಗೆ ಕೊಡಮಾಡುವ ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಒಂದು ಅಂಶ. ಅದರಂತೆಯೇ ಸಂವಿಧಾನ ಖಚಿತಪಡಿಸುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಹಿಂದೂಗಳಿಗೂ ಯಾವದೇ ಭೇದವಿಲ್ಲದೆ ಅನ್ವಯವಾಗುವಂತೆ ಮಾಡಬೇಕು. ಸ್ಥಳೀಯ ದೇವಸ್ಥಾನಗಳನ್ನು ನಿರ್ವಹಿಸುವ ಮತ್ತು ಆದಾಯವನ್ನು ಸೂಕ್ತವಾಗಿ ಬಳಸುವ ಅಧಿಕಾರವ ಜನರಿಗೆ ಸಿಗಬೇಕು. ಅದಕ್ಕೆ ಬೇಕಾದ ಸೂಕ್ತ ನಿಯಮಗಳನ್ನು ಸರ್ಕಾರ ರೂಪಿಸಬೇಕು. ತನ್ಮೂಲಕ ಈ ಸಂಸ್ಥೆಗಳು ಇನ್ನಷ್ಟು ಪರಿಣಾಮಕಾರಿಯಾಗಿ ಹಿಂದೂಸಮಾಜದ ಪ್ರಗತಿಗೆ ಇನ್ನಷ್ಟು ಶಕ್ತಿಯಿಂದ ಶ್ರಮಿಸುವಂತೆ ಮಾಡಬಹುದು. ದೇವಸ್ಥಾನಗಳಲ್ಲಿ ಭಕ್ತರು ಸಲ್ಲಿಸುವ ಹುಂಡಿ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ಆದಾಯ ದೇವಸ್ಥಾನ ನಿರ್ವಹಣೆ, ಜೀರ್ಣೋದ್ಧಾರ ಮತ್ತು ದೇವಸ್ಥಾನ/ಸಂಸ್ಥೆಗಳಿಂದ ನಡೆಸಲ್ಪಡುವ ಕಾರ್ಯಗಳಿಗೇ ವಿನಿಯೋಗಿಸಬೇಕೇ ಹೊರತು ಸರ್ಕಾರಿ ಬೊಕ್ಕಸ ತುಂಬಿಸಲು ಅಥವಾ ಇನ್ನ್ಯಾಯುವುದೋ ಯೋಜನೆಗೆ ಬಳಸಬಾರದು. ದೇವಸ್ಥಾನಗಳು ಹಿಂದೂ ಸಮಾಜದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶ್ರದ್ಧಾಕೇಂದ್ರಗಳೇ ಹೊರತು ಸರ್ಕಾರದ ಬೊಕ್ಕಸಕ್ಕೆ ಆದಾಯ ಗಳಿಸುವ ಅಂಗಡಿಗಳಲ್ಲ.

**ಅಶ್ವತ್ಥಮೇಕಂ ಪಿಚುಮಂದಮೇಕಮ್**
**ನ್ಯಗ್ರೋಧಮೇಕಂ ದಶ ತಿಂತ್ರಿಣೀಶ್ಚ।**
**ಕಪಿತ್ಥಬಿಲ್ವಾಮಲಕಾಮ್ರವೃಕ್ಷಾನ್**
**ಧರ್ಮಾರ್ಥಮಾರೋಪ್ಯ ಸ ಯಾತಿ ನಾಕಂ॥**

ಒಂದು ಅರಳಿ(ಅಶ್ವತ್ಥ) ಮರ, ಒಂದು ಬೇವಿನ ಮರ, ಒಂದು ಆಲದ ಮರ, ಹತ್ತು ಹುಣಿಸೇಮರ ಹಾಗೂ ಒಂದಿಷ್ಟು ಬೇಲ, ಬಿಲ್ವ, ನೆಲ್ಲಿ ಮತ್ತು ಮಾವಿನ ಮರಗಳನ್ನು ಧರ್ಮಾರ್ಥಕ್ಕಾಗಿ ಅಂದರೆ ಇತರರ ಒಳಿತಿಗಾಗಿ ಬೆಳೆಸಿದವನು ಸ್ವರ್ಗಕ್ಕೆ ಹೋಗುತ್ತಾನೆ.

# ಅಂತರ್ಜಲ ಹೆಚ್ಚಿಸಲು ಹೊಸ ಪ್ರಯೋಗ

ನೆಲದ ಮಾತು

ನೀರಿನ ಅಗತ್ಯ ಹೆಚ್ಚಾದಂತೆಲ್ಲ ಭೂಮಿಯೊಡಲಿನಿಂದ ನೀರನ್ನು ಹೊರತೆಗೆಯುವ ತಂತ್ರಗಳ ಬಳಕೆಯೂ ಹೆಚ್ಚುತ್ತಿವೆ. ಆದರೆ ಇದರಿಂದಾಗಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದನ್ನೂ ನಾವು ಕಾಣುತ್ತಿದ್ದೇವೆ. ಮುಂದಿನ ದಿನಗಳಲ್ಲಿ ನೀರಿನ ಬರ ಭಿಕರವಾಗುವ ಬಗ್ಗೆ ಜಲತಜ್ಞರುಗಳು ಎಚ್ಚರಿಕೆ ನೀಡುತ್ತಿರುವುದರ ಹೊರತಾಗಿಯೂ ಹೆಚ್ಚಿನ ಜನಸಮುದಾಯ ನೀರಿನ ಸದ್ಬಳಕೆ, ಮಳೆನೀರಿನ ಸಂಗ್ರಹ, ನೀರಿಂಗಿಸುವುದು, ಅಂತರ್ಜಲ ಮರುಪೂರಣ ಮೊದಲಾದ ಗಂಭೀರ ವಿಷಯಗಳ ಕುರಿತು ತಲೆಕೆಡಿಸಿಕೊಳ್ಳುತ್ತಿಲ್ಲ. ಇಂತವರ



ನಡುವೆ ಅಲ್ಲೊಬ್ಬರು ಇಲ್ಲೊಬ್ಬರು ನೀರಿನ ವಿಷಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದ ಕೃಷಿಕರು ಕಾಣಸಿಗುತ್ತಾರೆ. ಇಂತಹ ಓರ್ವ ರೈತ ಹೊನ್ನಾಳಿ ತಾಲೂಕಿನ ಕಮ್ಮಾರೆಗಟ್ಟೆಯ ಕೆ ಎಸ್ ಪ್ರಶಾಂತ್ ತಮ್ಮ 8.5ಎಕರೆ ಅಡಕೆ ತೋಟದಲ್ಲಿ ಒಂದು ಹನಿ ನೀರು ವ್ಯರ್ಥವಾಗದಂತೆ ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಇವರು ಅಡಕೆ ತೋಟಕ್ಕೆ ಹಾಯಿಸುವ ನೀರು ವ್ಯರ್ಥವಾಗಿ ಹರಿದುಹೋಗಲು ಬಿಡುವುದಿಲ್ಲ. ತೋಟದಲ್ಲಿ ಹರಿದ ಹೆಚ್ಚುವರಿ ನೀರು ಪುನಃ ಕೊಳವೆ ಬಾವಿಗೆ ಬಂದು ಅಂತರ್ಜಲ ಸೇರುವ ವ್ಯವಸ್ಥೆ ಮಾಡಿದ್ದಾರೆ. ಕೊಳವೆ ಬಾವಿಯ ಸುತ್ತ 10*11 ಅಡಿಯ ಇಂಗುಗುಂಡಿ ಅಗೆದಿದ್ದಾರೆ. ಕೊಳವೆ ಬಾವಿ ಸುತ್ತ 11ಅಡಿ ಆಳದವರೆಗೆ ಸಿಮೆಂಟಿನ ರಿಂಗ್ ಇಳಿಸಲಾಗಿದೆ. ಈ ರಿಂಗ್‌ಗಳ ಒಳಗೆ ಮತ್ತೆ 2.5 ಆಳದ ವರೆಗೆ ಸಣ್ಣ ರಿಂಗ ಹೂಳಲಾಗಿದೆ. ಇವುಗಳ ನಡುವೆ ಸುತ್ತ ಸಣ್ಣ ಜಲ್ಲಿಕಲ್ಲು, ಮರಳು ತುಂಬಲಾಗಿದೆ. ಹರಿದು ಬರುವ ನೀರು ಪಿಲ್ಟರ್‌ಗೊಂಡು ಕೊಳವೆ ಬಾಯಿಯಲ್ಲಿ ಅಂತರ್ಜಲ ಸೇರುವ ವ್ಯವಸ್ಥೆ ಮಾಡಲಾಗಿದೆ. ಮಳೆಯ ನೀರು ಸಹ ಅಂತರ್ಜಲ ಸೇರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಈ ವ್ಯವಸ್ಥೆಯ ಪರಿಣಾಮ ಕಂಡಿದ್ದು ಅಂತರ್ಜಲ ಮಟ್ಟ ಏರಿದೆ. ಸುತ್ತಲಿನ ಜಮೀನಿನಲ್ಲಿನ ಕೊಳವೆ ಬಾವಿಗಳು ಬತ್ತಿದ್ದರೂ ಪ್ರಶಾಂತರ ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾಗಿಲ್ಲ.

ಜೊತೆಗೆ ತಮ್ಮ ಜಮೀನಿನ ಸುತ್ತ ಸುಮಾರು ಐದು ಅಡಿ ಎತ್ತರದ ಒಡ್ಡು ನಿರ್ಮಿಸಿದ್ದಾರ. ಇದರಿಂದ ಇವರ ಜಮೀನಿನಲ್ಲಿ ಬಿದ್ದ ಮಳೆನೀರು ಹೊರಗಡೆಗೆ ಹರಿದುಹೋಗದೆ ಅಲ್ಲಿಯೇ ಇಂಗುತ್ತದೆ. ಪರಿಣಾಮ ಭೂಮಿಯಲ್ಲಿ ತೇವಾಂಶ ಹೆಚ್ಚಿರುವುದಲ್ಲದೇ ನೀರಿನ ಮಟ್ಟವೂ ಏರಿಕೆ ಕಂಡಿದೆ.

ಅಂತರ್ಜಲದ ಜೊತೆಗೆ ಭೂಮಿಯ ಫಲವತ್ತತೆಯನ್ನು ಸಂರಕ್ಷಿಸುವ ಕುರಿತೂ ಆಸಕ್ತಿವಹಿಸಿರುವ ಪ್ರಶಾಂತ್ ರಾಸಾಯನಿಕ ಮುಕ್ತವಾದ ಸಂಪೂರ್ಣ ಸಾವಾಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಉತ್ತಮ ಗುಣಮಟ್ಟದ ಸಾವಯವ ಗೊಬ್ಬರ ಹಾಗೂ ಸಗಣಿ ಗೊಬ್ಬರವನ್ನು ಬಳಸುತ್ತಾರೆ. ಜೊತೆಗೆ ಮಿಶ್ರಬೇಸಾಯವನ್ನು ಅನುಸರಿಸುತ್ತಿದ್ದು ಅಡಕೆಯ ಜೊತೆಗೆ ಬಾಳೆ, ಹೆಸರು, ಆಲಸಂದೆ, ಸಜ್ಜೆ, ಕೆಂಪುಜೋಳ, ನುಗ್ಗೇಕಾಯಿ, ಶುಂಠಿ, ಡಯಾಂಚಾ ಮೊದಲಾದ ಬೆಳೆಗಳನ್ನೂ ಬೆಳೆಯುತ್ತಿದ್ದಾರೆ. ತೋಟದ ಗಡಿಗಳಲ್ಲಿ ತೇಗದ ಮರಗಳನ್ನು ಬೆಳೆಸುತ್ತಿದ್ದು ದೀರ್ಘಕಾಲದ ಆದಾಯದ ಬೆಳೆಯ ಬಗ್ಗೆಯು ರೈತರು ಗಮನಹರಿಸಬೇಕು ಎನ್ನುತ್ತಾರೆ. ಹೀಗೆ ಕೃಷಿಯಲ್ಲಿ ಹೊಸ ಪ್ರಯೋಗಳನ್ನು ಮಾಡಲು ಭಾರತೀಯ ಕಿಸಾನ್ ಸಂಘ ಪ್ರೇರಣೆ ಎನ್ನುತ್ತಾರೆ ಪ್ರಯೋಗಶೀಲ ಕೃಷಿಕ ಕೆ.ಎಸ್. ಪ್ರಶಾಂತ್, ಮೊ: 76763 29784.

## ಬಂಕಿಮಚಂದ್ರ ಚಟ್ಟೋಪಾಧ್ಯಾಯ

(27 ಜೂನ್ 1838 – 8 ಏಪ್ರಿಲ್ 1894)



ಬಂಕಿಮರು ಸ್ವಾತಂತ್ರಪೂರ್ವ ಭಾರತದ ಓರ್ವ ಪ್ರಖರ ಕವಿ, ಕಾದಂಬರಿಕಾರ, ಪ್ರಬಂಧಕಾರ ಹಾಗೂ ಪತ್ರಕರ್ತರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರೇರೇಪಿಸಿದ ವಂದೇ ಮಾತರಮ್ ಗೀತೆಯ ಕವಿಯಾಗಿ ಇವರು ಅತ್ಯಂತ ಪ್ರಸಿದ್ಧರು.

ಬಂಕಿಮರನ್ನು ಭಾರತದ ಸಾಹಿತ್ಯಿಕ ಪುನರುತ್ಥಾನದಲ್ಲಿನ ಓರ್ವ ಪ್ರಮುಖ ವ್ಯಕ್ತಿಯಾಗಿ ಪರಿಗಣಿಸಲಾಗುತ್ತದೆ. ಕಾದಂಬರಿಗಳು, ಪ್ರಬಂಧಗಳು ಮತ್ತು ವ್ಯಾಖ್ಯಾನಗಳನ್ನು ಒಳಗೊಂಡಂತೆ ಅವರ ಬರಹಗಳು ಸಾಂಪ್ರದಾಯಿಕವಾದ ಛಂದೋಬದ್ಧ ಪದ್ಯ–ಉದ್ದೇಶಿತ ಭಾರತೀಯ ಬರಹಗಳಿಗಿಂತ ವಿಭಿನ್ನವಾದ ಒಂದು ತಿರುವುದಾರಿಯನ್ನು ಹುಟ್ಟುಹಾಕಿದವು. ಜೊತೆಗೆ ಭಾರತದ ಉದ್ದಗಲಕ್ಕೂ ಇದ್ದ ಸಾಹಿತಿಗಳಿಗೆ ಮತ್ತು ಜನಸಾಮಾನ್ಯರಿಗೆ ರಾಷ್ಟ್ರವಾದದ ನವಪ್ರೇರಣೆಯನ್ನು ಒದಗಿಸಿದವು.

ಯಾದವ್ ಚಂದ್ರ ಚಟ್ಟೋಪಾಧ್ಯಾಯ ಮತ್ತು ದುರ್ಗಾದೇವಿ ಇವರ ಹೆತ್ತವರು. ಪಶ್ಚಿಮ ಬಂಗಾಲದ ಉತ್ತರ 24 ಪರಗಣ ಜಿಲ್ಲೆಯ ನೈಹತಿಯಲ್ಲಿರುವ ಕಂಥಾಲಪಾರಾ ಇವರ ಹುಟ್ಟೂರು. ಕಲ್ಕತ್ತಾ ವಿಶ್ವವಿದ್ಯಾಲಯದ ಮೊದಲ ಇಬ್ಬರು ಪದವೀಧರರ ಪೈಕಿ ಬಂಕಿಮರು ಒಬ್ಬರಾಗಿದ್ದರು. ತಂದೆಯ ರೀತಿಯಲ್ಲಿಯೇ ಜೆಸ್ಸೋರ್‌ನ ಉಪ–ಜಿಲ್ಲಾಧಿಕಾರಿಯಾಗಿ ಅವರು ನೇಮಿಸಲ್ಪಟ್ಟರು. ನಂತರ ಉಪನ್ಯಾಯಾಧಿಪತಿಯ ಹುದ್ದೆಗೇರಿದ ಬಂಕಿಮರು 1891ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದರು. ಅವರ ಕಾರ್ಯಾವಧಿಯು ಆಡಳಿತ ಸಹೋದ್ಯೋಗಿ ಮತ್ತು ಸಹವರ್ತಿ ಬ್ರಿಟಿಷ್ ಅಧಿಕಾರಿಗಳೊಂದಿಗಿನ ತುರುಸಿನ ಘರ್ಷಣೆಗಳ ಘಟನೆಗಳಿಂದ ತುಂಬಿಹೋಗಿತ್ತು. ಹಾಗಿದ್ದಗಲೂ 1894ರಲ್ಲಿ ಭಾರತದ ಸಾಮ್ರಾಜ್ಯದ ಸಹಯೋಗಿ ದರ್ಜೆಯ ಒಂದು ಹುದ್ದೆಯನ್ನು ಅವರಿಗೆ ನೀಡಲಾಯಿತು. ಇದು ಅವರ ಕಾರ್ಯಕ್ಷಮತೆಗೆ ಸಾಕ್ಷಿ.

ದುರ್ಗೇಶ್ ನಂದಿನಿ, ಕಪಾಲಕುಂಡಲ, ಮೃಣಾಲಿನಿ, ವಿಷವೃಕ್ಷ, ಆನಂದಮಠ, ದೇವಿ ಚೌಧುರಾನಿ, ಕಮಲಾಕಾಂತ, ಸೀತಾರಾಮ್ ಇತ್ಯಾದಿಗಳು ಬಂಕಿಮರ ಪ್ರಮುಖ ಕಾದಂಬರಿಗಳು. ಕೃಷ್ಣ ಚರಿತ್ರ, ಧರ್ಮತತ್ವ, ದೇವತತ್ತ್ವ ಮತ್ತು ಶ್ರೀಮದ್ಭಗವದ್‌ಗೀತಾ ಇವುಗಳು ಅವರ ಪ್ರಮುಖ ಧಾರ್ಮಿಕ ವ್ಯಾಖ್ಯಾನಗಳು. ಇದಲ್ಲದೆ ‘ಲಲಿತಾ ಓ ಮಾನಸ್’ ಎಂಬ ಕವನ ಸಂಕಲನವನ್ನು ಮತ್ತು ಲೋಕ್ ರಹಸ್ಯ (ಸಮಾಜದ ಕುರಿತಾದ ಪ್ರಬಂಧಗಳು) ಬಿಜ್ಞಾನ್ ರಹಸ್ಯ (ವಿಜ್ಞಾನದ ಮೇಲಿನ ಪ್ರಬಂಧಗಳು) ಬಿಚಿತ್ರ ಪ್ರಬಂಧ (ವಿವಿಧ ಬಗೆಯ ಪ್ರಬಂಧಗಳು), ಸಮ್ಯಾ ಎಂಬ ಪ್ರಬಂಧಗಳನ್ನೂ ರಚಿಸಿದ್ದು ಅವರ ವಿಷಯಗಳ ವಿಸ್ತಾರ ಮತ್ತು ಜ್ಞಾನದ ಆಪಾರವನ್ನು ತಿಳಿಸುತ್ತವೆ.

ಇವೆಲ್ಲವೂಗಳಲ್ಲಿ ಆನಂದಮಠ ಎಂಬುದು ಒಂದು ರಾಜಕೀಯ ಕಾದಂಬರಿಯಾಗಿದ್ದು, ಮುರ್ಷಿದಾಬಾದ್‌ನ ಮುಸ್ಲಿಂ ನವಾಬನ ಯೋಧರೊಂದಿಗೆ ಹೋರಾಡುವ ಓರ್ವ ಸನ್ಯಾಸಿ ಸೈನಿಕನನ್ನು ಅದು ಚಿತ್ರಿಸುತ್ತದೆ. ಇಂಗ್ಲೀಷ್‌ನಲ್ಲಿ ಇದು The Abbey of Bliss ಹೆಸರಿನಲ್ಲಿ ಪ್ರಕಟಣೆಗೊಂಡಿದೆ. ಬಂಗಾಳದಲ್ಲಿ ಅಸ್ತಿತ್ವದಲ್ಲಿದ್ದ ವಿದೇಶಿ ಟರ್ಕೋ–ಆಫ್ಘನ್ ಮುಸ್ಲಿಂ ಆಳ್ವಿಕೆಯನ್ನು ಬೇರುಸಹಿತ ಕೀಳಲು ಹಿಂದೂ ರಾಷ್ಟ್ರೀಯತೆಯು ಮೈಕೊಡವಿಕೊಂಡು ಎದ್ದುನಿಲ್ಲುವುದಕ್ಕೆ ಸಂಬಂಧಿಸಿದಂತೆ ಮತ್ತು ಸ್ವಯಂ ಆಳ್ವಿಕೆಗಾಗಿ ಹಿಂದೂಗಳು ಯೋಗ್ಯರಾಗುವವರೆಗೂ ಒಂದು ತಾತ್ಕಾಲಿಕ ಪರ್ಯಾಯವಾಗಿ ಈಸ್ಟ್ ಇಂಡಿಯಾ ಕಂಪನಿಯನ್ನು ಚಾಲ್ತಿಗೆ ತರಲು ಈ ಕಾದಂಬರಿಯು ಕರೆನೀಡುತ್ತದೆ. ಈ ಕಾದಂಬರಿಯು ವಂದೇ ಮಾತರಂ ಎಂಬ ಗೀತೆಯ ಮೂಲವೂ ಆಗಿದ್ದು, ಇದಕ್ಕೆ ರವೀಂದ್ರನಾಥ ಟ್ಯಾಗೋರ್‌ರವರು ಸಂಗೀತ ಸಂಯೋಜಿಸಿದ್ದರು; ಈ ಗೀತೆಯನ್ನು ಭಾರತದ ರಾಷ್ಟ್ರೀಯತಾವಾದಿಗಳು ಆಸಕ್ತಿವಹಿಸಿ ಸ್ವೀಕರಿಸಿದರು.’ವಂದೇಮಾತರಂ’ ಸ್ವಾತಂತ್ರ್ಯ ಹೋರಾಟದ ಉದ್ದಗಲಕ್ಕೂ ದೇಶಪ್ರೇಮಿಗಳ ಪ್ರಾಣಪ್ರಿಯ ಘೋಷಣಾಮಂತ್ರವಾಗಿತ್ತು. ಅದೀಗ ಭಾರತದ ರಾಷ್ಟ್ರೀಯ ಗೀತೆಯಾಗಿದೆ.

ಬ್ರಿಟಿಷರ ವಿರುದ್ಧ ಶೈಶವದಲ್ಲಿದ್ದ ಭಾರತದ ಸ್ವಾತಂತ್ರ್ಯದ ಹೋರಾಟಕ್ಕೆ ಮತ್ತು ರಾಷ್ಟ್ರೀಯತೆಗೆ ತಮ್ಮ ಸಾಹಿತ್ಯದ ಮೂಲಕ ಹೊಸಹುರುಪನ್ನು,ಚೈತನ್ಯವನ್ನು ತುಂಬಿದವರಾಗಿ ಬಂಕಿಮರು ಸದಾಕಾಲ ಸ್ಮರಣೆಯಲ್ಲಿರುತ್ತಾರೆ. 27 ಜೂನ್ ಈ ಮಹನೀಯರ ಜನ್ಮದಿನ.

ಸಂಪಾದಕೀಯ ಸಹಕಾರ ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಸುಮಂತ್, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಸತ್ಯಾನಾರಾಯಣ ಶಾನಭಾಗ್

ಮುಂಬೈ ಮೂಲದ ಇ-ಪೇಯ್ ಲೇಟರ್ ಸಂಸ್ಥೆಯೊಂದಿಗೆ ಕೈಜೋಡಿಸಿರುವ ಭಾರತೀಯ ರೇಲ್ವೆ ಟಿಕೆಟು ಪಡೆದು ನಂತರ ಹಣಪಾವತಿಸುವ ಹೊಸ ಸೌಲಭ್ಯವನ್ನು ಪರಿಚಯಿಸಲು ಮುಂದಾಗಿದೆ. ಸಾಮಾನ್ಯವಾಗಿ ಮುಂಗಡ ರೈಲು ಟಿಕೆಟು ಕಾಯ್ದಿರಿಸುವಾಗ, ಹಣ ಪಾವತಿಸಲು ಸಮಯ ತಗಲುತ್ತಿದ್ದಿದರಿಂದ ಆದ್ಯತೆ ಕಾಯ್ದಿರಿಸುವಿಕೆಯೆಂದು ನಿರ್ಧರಿಸಿ ಹಣ ಪಾವತಿಗೆ 14 ದಿನಗಳ ಗಡುವನ್ನು ನೀಡುವುದಾಗಿ ಭಾರತೀಯ ರೈಲು ತಿಳಿಸಿದೆ. ಪ್ಯಾನ್ ಆಧಾರ್ ನಂಬರ್, ವಿಳಾಸ, ಮೊಬೈಲ್ ನಂಬರ್ ಮೊದಲಾದ ಸೂಕ್ತ ಮಾಹಿತಿ ನೀಡಿ ನೋಂದಾಯಿಸಿಕೊಂಡ ಗ್ರಾಹಕರು ಈ ಸೌಲಭ್ಯ ಪಡೆಯಬಹುದಾಗಿದ್ದು ಆಗಾಗ್ಗೆ ಆನ್‌ಲೈನ್‌ನಲ್ಲಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಈ ಸೌಲಭ್ಯದಿಂದ ಅನುಕೂಲವಾಗಲಿದೆ.



ಭಾರತೀಯ ಮೂಲದ 12 ವರ್ಷದ ಅನನ್ಯಾ ವಿನಯ್ ಅಮೇರಿಕದ ಪ್ರತಿಷ್ಠಿತ ಸ್ಕ್ರಿಪ್ಸ್ ನ್ಯಾಶನಲ್ ಬೀ ಸ್ಪರ್ಧೆಯ 90ನೇ ಅವತರಣಿಕೆಯಲ್ಲಿ ಜಯಶಾಲಿಯಾಗಿದ್ದಾಳೆ. ಆಂಗ್ಲ ಶಬ್ದಗಳ ಸರಿಯಾದ ಸ್ಪೆಲ್ಲಿಂಗ್ ಉಚ್ಚರಿಸುವ ಸವಾಲು ಉಳ್ಳ ಈ ಸ್ಪರ್ಧೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಮೂಲದ ವಿದ್ಯಾರ್ಥಿಗಳೇ ಗೆಲ್ಲುತ್ತಿದ್ದು ಸತತವಾಗಿ 13ನೇ ಬಾರಿ ಭಾರತೀಯ ಮೂಲದ ವಿದ್ಯಾರ್ಥಿಯ ಗೆಲುವು ದಾಖಲಾಗಿದೆ. ಕಳೆದ 22 ವರ್ಷಗಳಲ್ಲಿ 18 ಬಾರಿ ಭಾರತೀಯ ಮೂಲದ ವಿದ್ಯಾರ್ಥಿಗಳು ಗೆದ್ದಿದ್ದಾರೆ. ಕೊನೆಯ ಸುತ್ತಿನಲ್ಲಿ ಅನನ್ಯ ವಿನಯ್ ಪ್ರತಿಸ್ಪರ್ಧಿಯಾಗಿದ್ದ ರೋಹನ್ ರಾಜೀವ್ ಸಹ ಭಾರತೀಯ ಮೂಲದವನಾಗಿದ್ದಾನೆ.



**ಇನ್ನೊಂದೆಡೆ ಭಾರತೀಯ ಮೂಲದ ಲಿಯೋ ವಾರಡ್ಕರ್ ಐರ್ಲೆಂಡ್ ದೇಶದ ಪ್ರಧಾನಮಂತ್ರಿಯಾಗಿ ಚುನಾಯಿತರಾಗಿದ್ದಾರೆ. ಇವರ ತಂದೆ ಡಾ ಅಶೋಕ್ ವಾರಡ್ಕರ್ ಮಹಾರಾಷ್ಟ್ರದ ಕೊಂಕಣ ಕರಾವಳಿಯ ವಾರಡ್ ಪ್ರದೇಶದವರಾಗಿದ್ದು 1960ರಲ್ಲಿ ಐರ್ಲೆಂಡ್ ದೇಶಕ್ಕೆ ವಲಸೆ ಹೋಗಿದ್ದರು. 38 ವರ್ಷ ಲಿಯೋ ವಾರಡ್ಕರ್ ದೇಶದ ಪ್ರಧಾನಿಯಾದ ಅತ್ಯಂತ ಕಡಿಮೆ ವಯಸ್ಸಿನ ನಾಯಕ ಹಾಗೂ ಜನಾಂಗೀಯ ಅಲ್ಪಸಂಖ್ಯಾತ ಸಮುದಾಯದ ಪ್ರಪ್ರಥಮ ವ್ಯಕ್ತಿಯೆನಿಸಿದ್ದಾರೆ. ಪ್ರಸ್ತುತ ಮಾರಿಶಸ್‌ನ ಅಧ್ಯಕ್ಷ ಅನಿರೂದ್ ಜುಗನಾತ್ ಮತ್ತು ಪೋರ್ಚುಗಲ್‌ನ ಪ್ರಧಾನಿ ಅಂಟೋನಿಯೋ ಕೋಸ್ಟಾ ಕೂಡ ಭಾರತೀಯ ಮೂಲದವರಾಗಿದ್ದಾರೆ.**

ಕಳೆದ ಸೆಪ್ಟಂಬರ್‌ನಲ್ಲಿ ಸೇನೆ ಜಮ್ಮು ಕಾಶ್ಮೀರದ ಗಡಿನಿಯಂತ್ರಣ ರೇಖೆಯನ್ನು ದಾಟಿ ಸರ್ಜಿಕಲ್ ಸ್ಟ್ರೈಕ್ ನಡೆಸಿ ಉಗ್ರ ನೆಲೆಗಳನ್ನು ನಾಶಮಾಡಿದ ನಂತರ ಗಡಿಯಾಚೆಗಿಂದ ಉಗ್ರವಾದಿಗಳು ಒಳನುಸುಳುವುದು ಶೇ.45 ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಗೃಹಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ. 2014-17ರ ಅವಧಿಯಲ್ಲಿ ರಾಜ್ಯದಲ್ಲಿ 368 ಉಗ್ರರನ್ನು ತಟಸ್ಥಗೊಳಿಸಲಾಗಿದೆ ಎಂದು ಅವರು ತಿಳಿಸಿದರು. ಇದೇ ಅವಧಿಯಲ್ಲಿ ನಕ್ಸಲ್ ದಾಳಿಯೂ ಶೇ25 ಕಡಿಮೆಯಾಗಿದ್ದು ನಕ್ಸಲ್ ದಾಳಿಯಿಂದ ಮೃತರಾದವರ ಸಂಖ್ಯೆಯೂ ಶೇ42ಕ್ಕೆ ಇಳಿದಿದೆ. ಜೆಹಾದಿ ಸಂಘಟನೆಗಳಾದ ಐಎಸ್‌ಐಎಸ್ ಮತ್ತು ಅನ್ಸಾರ್ ಉಲ್ ಅಮ್ಮಾಹ್‌ಗಳನ್ನು ಭಯೋತ್ಪಾದಕ ಸಂಘಟನೆಗಳ ಪಟ್ಟಿಗೆ ಸೇರಿಸಲಾಗಿದ್ದು ಭದ್ರತಾ ಏಜನ್ಸಿಗಳು ಐಎಸ್‌ಐಎಸ್ ಸಂಪರ್ಕವುಳ್ಳ 90 ಜನರನ್ನು ಬಂಧಿಸಿವೆ ಎಂದು ಗೃಹಸಚಿವರು ತಿಳಿಸಿದ್ದಾರೆ.

ಈ ನಡುವೆ ಕಾಶ್ಮೀರದಲ್ಲಿ ಕಲ್ಲುತೂರಾಟಗಾರ ಮೂಲಕ ನಡೆಯುತ್ತಿರುವ ಹಿಂಸಾಚಾರಕ್ಕೆ ಮತ್ತು ಕಣಿವೆಯ ಭಯೋತ್ಪಾದನೆಗೆ ಪಾಕಿಸ್ತಾನದಿಂದ ಹಣಸಂದಾಯವಾಗುತ್ತಿದೆ ಎನ್ನುವ ಗುಮಾನಿಯ ಮೇಲೆ ಪ್ರತ್ಯೇಕತಾವಾದಿಗಳ ಮನೆ ಮತ್ತು ಕಾರ್ಯಾಲಯಗಳ ಮೇಲೆ ದಾಳಿ ನಡೆಸಿದ ರಾಷ್ಟ್ರೀಯ ತನಿಖಾ ದಳ-ಎನ್‌ಐಎಯ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ.



**ಫ್ರೆಂಚ್ ನೌಕಾ ಮಿಲಿಟರಿ ಸಂಸ್ಥೆಯ ಸಹಯೋಗದಲ್ಲಿ ಮುಂಬೈನ ಮಾಝಗಾಂವ್ ಡಾಕ್ ಬಂದರಿನಲ್ಲಿ ನಿರ್ಮಿಸಲಾಗುತ್ತಿರುವ ಸ್ಕಾರ್ಪೀನ್ ವರ್ಗದ ಎರಡನೇ ಸಬ್‌ಮರೀನ್ ಐಎನ್‌ಎಸ್ ಖಂಡೇರಿ ಪರೀಕ್ಷಾರ್ಥ ತಿರುಗಾಟ ಆರಂಭಿಸಿದೆ. ಆಳ ಕಡಲಿನ ಉಗ್ರ ಜೀವಿಯಾದ ಸ್ಕಾರ್ಪೀನ್ ಹೆಸರು ಹೊತ್ತಿರುವ ಈ ಸಬ್‌ಮರೀನ್‌ಗಳು ಸ್ಕಾರ್ಪೀನ್‌ನಂತೆ ಸದ್ದಿಲ್ಲದೇ ಅನೇಕ ರಕ್ಷಣಾ ಕಾರ್ಯಗಳನ್ನು ನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿದ್ದು ಭಾರತೀಯ ನೌಕಾದಳದ ಬಲ ಹೆಚ್ಚಿಸಲಿವೆ. ಯೋಜನೆಯಲ್ಲಿರುವ ಇಂತಹ ಒಟ್ಟೂ 6 ಸಬ್‌ಮರೀನ್‌ಗಳ ಪೈಕಿ ಮೊದಲನೆಯದಾದ ಐಎನ್‌ಎಸ್ ಕಲ್ವರಿ ಪರೀಕ್ಷೆಗಳನ್ನು ಬಹುತೇಕ ಮುಗಿಸಿದ್ದು ಅಗಸ್ಟ್ ವೇಳೆಗೆ ನೌಕಾದಳ ಸೇರಲಿದೆ.**



ಊರಿನ ಹುತಾತ್ಮ ಸೈನಿಕನ ನೆನಪಿನಲ್ಲಿ ಕುಸ್ತಿ ಅಖಾಡಾ ಕಟ್ಟಲು ಊರಿನ ಜನರೇ ಇಟ್ಟಿಗೆ, ಸಿಮೆಂಟ ಒಂದು ದಿನದ ಸಂಬಳ, ಶ್ರಮದಾನ ಮೊದಲಾದ ರೀತಿಯಲ್ಲಿ ತಮ್ಮ ಕಾಣಿಕೆ ಸಮರ್ಪಿಸುತ್ತಿರುವ ಘಟನೆ ಹರ್ಯಾಣಾದ ಕರ್ನಲ್ ಜಿಲ್ಲೆಯ ಖೇರಿ ಮಾನ್‌ಸಿಂಗ್ ಗ್ರಾಮದಲ್ಲಿ ನಡೆದಿದೆ. ಕೇಂದ್ರ ಮೀಸಲು ಪೋಲಿಸ್ ಪಡೆ-ಸಿಆರ್‌ಪಿಎಫ್‌ನ ಯೋಧ ರಾಮ್ ಮೆಹರ್ ಇದೇ ಗ್ರಾಮದ ನಿವಾಸಿಯಾಗಿದ್ದು ಇತ್ತೀಚೆಗೆ ಛತ್ತೀಸ್‌ಗಢ್‌ನಲ್ಲಿ ನಕ್ಸಲ್ ಉಗ್ರಹ ಜತೆಗೆ ನಡೆದ ಹೋರಾಟದಲ್ಲಿ ಹುತಾತ್ಮರಾದರು. ಕುಸ್ತಿ ಪ್ರಿಯರಾಗಿದ್ದ ಮೆಹರ್ ಕುಟುಂಬ್ ಕುಸ್ತಿ ಅಖಾಡಾ ನಿರ್ಮಾಣಕ್ಕಾಗಿ ಜಮೀನನ್ನು ನೀಡಿದ್ದು ಅವರೇ ಒಂದು ಗರಡಿಮನೆಯನ್ನೂ ನಡೆಸುತ್ತಿದ್ದಾರೆ. ಇವರ ಗರಡಿಮನೆಯಲ್ಲಿ ಸುಮಾರು 50 ಯುವಕರು ಸಾಧನೆ ಮಾಡುತ್ತಿದ್ದಾರೆ, ಇಲ್ಲಿ ಪಳಗಿದ ಅನೇಕರು ಸೈನ್ಯವನ್ನೂ ಸೇರಿದ್ದಾರೆ. ಯೋಧ ರಾಮ್ ಮೆಹರ್ ಸ್ಮೃತಿಮಂದಿರ ಕುಸ್ತಿ ಅಖಾಡಾಕ್ಕಾಗಿ ಏಕ್ ಈಂಟ್ ಶಹೀದ್ ಕೆ ನಾಮ್ ಎನ್ನುವ ಘೋಷಣೆಯೊಂದಿಗೆ ಸಂಗ್ರಹ ಮಾಡಲಾಗುತ್ತಿದೆ.

## ಸಾಲುದ್ದದ ಸುದ್ದಿಗಳು



ಡಿಜಿಟಲ್ ಹಣ ಪಾವತಿಗಾಗಿ ಅಧಿಕೃತ ಇ-ವ್ಯಾಲೇಟ್ ಆರಂಭಿಸಿದ ದೇಶದ ಮೊದಲ ರಾಜ್ಯವಾಗಿದೆ ತೆಲಂಗಾಣ. ಖಾಸಗೀ ಸಹಭಾಗಿತ್ವದಲ್ಲಿ ತೆಲಂಗಾಣ ಸರ್ಕಾರ ಆರಂಬಿಸಿರುವ ಟಿ-ವ್ಯಾಲೆಟ್ ಹೆಸರಿನ ಈ ತಂತ್ರಾಂಶ ಆಂಡ್ರಾಯಿಡ್ ಮತ್ತು ಐಓಸ್‌ಗಳಲ್ಲಿ ಲಭ್ಯವಿದ್ದು ಇದರಿಂದ ಸರ್ಕಾರಿ ಮತ್ತು ಖಾಸಗಿ(ಇಬ್ಬರ ನಡುವೆ) ಹಣ ಪಾವತಿ ವ್ಯವಹಾರ ಮಾಡಬಹುದು. ಹಾಗೆಯೇ ಪಿಂಚಣಿ, ನಿವೃತ್ತಿ ವೇತನ, ವಿದ್ಯಾರ್ಥಿ ವೇತನ ಮೊದಲಾದ ಸರ್ಕಾರಿ ಸವಲತ್ತಿನ ಹಣಸಂದಾಯಕ್ಕೂ ಟಿ-ವ್ಯಾಲೆಟ್ ಬಳಕೆಯಾಗಲಿದೆ.

**ಈ ಬಾರಿ ರಾಜ್ಯ ಸ್ಥಾಪನಾ ದಿವಸವನ್ನು ವಿಶಿಷ್ಟವಾಗಿ ಆಚರಿಸಲು ನಿರ್ಧರಿಸಿರುವ ಹರಿಯಾಣ ರಾಜ್ಯದ 2.5ಕೋಟಿ ಜನಸಂಖ್ಯೆಗೆ ಸಮನಾಗಿ 2.5ಕೋಟಿ ಗಿಡಗಳನ್ನು ನೆಡಲು ನಿರ್ಧರಿಸಿದೆ. 1966ರ ಜನವರಿ 1ರಂದು ರಾಜ್ಯ ಪಂಜಾಬ್‌ನಿಂದ ಪ್ರತ್ಯೇಕಗೊಂಡು ಅಸ್ತಿತ್ವಕ್ಕೆ ಬಂದಿತು.**

**ರಾಜಸ್ಥಾನ ರಾಜ್ಯದ 4900ಕ್ಕೂ ಹೆಚ್ಚು ಗ್ರಾಮ ಪಂಚಾಯತಗಳು ಬಯಲು ಶೌಚ ಮುಕ್ತ ಎಂದು ಘೋಷಣೆಗೊಂಡಿವೆ. ಸ್ವಚ್ಛ ಭಾರತ ಮಿಶನ್ ಅಂಗವಾಗಿ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 58 ಲಕ್ಷಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ.**

## ಮತಾಂತರಗೊಂಡ ಯುವತಿಯ ಮದುವೆ ರದ್ದುಪಡಿಸಿದ ಹೈಕೋರ್ಟ್

**ಮುಸ್ಲಿಂ ಮತಕ್ಕೆ ಮತಾಂತರಗೊಂಡು ಮುಸಲ್ಮಾನನೊಂದಿಗೆ ವಿವಾಹವಾದ ಹಿಂದು ಯುವತಿಯ ಮದುವೆಯನ್ನು ಹೈಕೋರ್ಟ್ ರದ್ದುಗೊಳಿಸಿದ ಘಟನೆ ಕೇರಳದಲ್ಲಿ ನಡೆದಿದೆ. ಹೀಗೆ ಮತಾಂತರಗೊಂಡ ಯುವತಿ ಅಖಿಲಾಳ ತಂದೆ ಕೊಟ್ಟಾಯಮ್ ಜಿಲ್ಲೆಯ ವೈಕೊಮ್‌ನ ಕೆ ಎಮ್ ಅಶೋಕನ್ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದರು. ಇಸ್ಲಾಮಿಕ್ ಸ್ಟೇಟ್‌ಗೆ ಸೇರಿಸುವ ಸಲುವಾಗಿ ತನ್ನ ಮಗಳನ್ನು ಮತಾಂತರಗೊಳಿಸಲಾಗಿತ್ತು ಎಂದು ಅವರು ದೂರಿದ್ದರು. ದೂರಿನ ವಿಚಾರಣೆ ನಡೆಸಿದ ಹೈಕೋರ್ಟ್ 'ಮದುವೆಯು ಅವಳ ಜೀವನದ ಮಹತ್ವದ ನಿರ್ಧಾರವಾಗಿದ್ದು ಪಾಲಕರ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ಮಾತ್ರ ಈ ನಿರ್ಣಯವನ್ನು ತೆಗೆದುಕೊಳ್ಳಬಹುದು' ಎಂದು ಹೇಳಿದೆ. ಇತ್ತೀಚೆಗೆ ಕೇರಳದಲ್ಲಿ ಅನೇಕ ಯುವಕ ಯುವತಿಯರು ಕಾಣೆಯಾಗುತ್ತಿದ್ದು ಹೀಗೆ ಕಾಣೆಯಾದವರು ಇಸ್ಲಾಮಿಕ್ ಸ್ಟೇಟ್ ಸೇರಿದ್ದಾರೆ ಎಂದು ಹೇಳಲಾಗುತ್ತಿದೆ, ಇವರಲ್ಲಿ ಅನೇಕರು ಹೊಸದಾಗಿ ಮತಾಂತರವಾದವರು ಎನ್ನುವುದು ಗಮನಿಸಬೇಕಾದ ಕಳವಳದ ಅಂಶವಾಗಿದೆ.**

ಮಹಾರಾಷ್ಟ್ರದ ನಾಗಪುರ ವಿದ್ಯುತ್ ಚಾಲಿತ ಸಾರ್ವಜನಿಕ ಸಾರಿಗೆ ಹೊಂದಿದ ದೇಶದ ಪ್ರಥಮ ನಗರವಾಗಿದೆ. ವಿದ್ಯುತ್ ಚಾಲಿತ ಟ್ಯಾಕ್ಸಿ, ಬಸ್ ಮತ್ತು ಆಟೋ ಸಾರಿಗೆ ನಗರದಲ್ಲಿ ಆರಂಭವಾಗಿದ್ದು ಒಟ್ಟೂ 200 ವಿದ್ಯುತ್ ಚಾಲಿತ ಸಾರ್ವಜನಿಕ ಸಾರಿಗೆ ವಾಹನಗಳು ನಾಗರಿಕ ಸೇವೆಗೆ ಲಭ್ಯವಾಗಿವೆ.



22 ವರ್ಷಗಳ ನಂತರ 1 ರೂಪಾಯಿ ಮುಖ ಬೆಲೆಯ ನೋಟುಗಳನ್ನು ಪುನಃ ಮುದ್ರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು ಸದ್ಯದಲ್ಲೇ ಚಲಾವಣೆಗೆ ಬರಲಿದೆ. ಈ ನೋಟಿನ ಮೇಲೆ ಕೇಂದ್ರ ಹಣಕಾಸು ಸಚಿವಾಲಯದ ಸೆಕ್ರೆಟರಿಯ ಸಹಿ ಇರಲಿದೆ. ಉಳಿಸ ಮುಖಬೆಲೆಯ ನೋಟುಗಳನ್ನು ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡುವುದರಿಂದ ಅವುಗಳ ಮೇಲೆ ರಿಸರ್ವ್ ಬ್ಯಾಂಕ್ ಗವರ್ನರ್ ಅಂಕಿತ ಇರುತ್ತದೆ. 1 ರೂ ನೋಟನ್ನು ಮಾತ್ರ ಕೇಂದ್ರ ಹಣಕಾಸು ಸಚಿವಾಲಯ ಚಲಾವಣೆಗೆ ಬಿಡುತ್ತದೆ.



**ದೇಶದ ಮೊದಲ ಸಾರ್ವಜನಿಕ ಬೈಸಿಕಲ್ ಬಾಡಿಗೆ ವ್ಯವಸ್ಥೆ 'ಟ್ರಿಣ್ ಟ್ರಿಣ್' ಮೈಸೂರಿನಲ್ಲಿ ಆರಂಭವಾಗಿದೆ. ಈ ಯೋಜನೆಯಲ್ಲಿ ಒಟ್ಟೂ 450 ಸೈಕಲ್‌ಗಳನ್ನು ನಗರದಾದ್ಯಂತ ಸ್ಥಾಪಿಸಿರುವ 45 ಡಾಕಿಂಗ್ ಸ್ಟೇಶನ್‌ಗಳಲ್ಲಿ ನಿಲ್ಲಿಸಲಾಗುವುದು. 350 ರೂಪಾಯಿ ನೀಡಿ ಸದಸ್ಯತ್ವ ಪಡೆದುಕೊಳ್ಳುವವರು(ಇದರಲ್ಲಿ 250 ರೂ ಮರುಪಾವತಿಸಲಾಗುವುದು) ಸ್ಮಾರ್ಟ್ ಕಾರ್ಡ್ ಪಡೆದು ನಗರದ ಯಾವುದೇ ಡಾಕಿಂಗ್ ಸ್ಟೇಶನ್ನಿನಿಂದ ಈ ಸ್ಮಾರ್ಟ್ ಕಾರ್ಡ್ ಬಳಸಿ ಸೈಕಲ್ ಪಡೆದುಕೊಳ್ಳಬಹುದು. ಎರಡು ತಾಸಿಗೆ 5ರೂ, ಮೂರಕ್ಕೆ 10 ಹೀಗೆ ಬಾಡಿಗೆ ನೀಡಿ ಯಾವುದೇ ಡಾಕಿಂಗ್ ಸ್ಟೇಶನ್‌ನಲ್ಲಿ ಸೈಕಲ್ಲನ್ನು ವಾಪಸ್ಸು ನೀಡಬಹುದು.**

## ಗಂಗಾ ಯಮುನಾ ನದಿಗಳು ಜೀವಂತ ವ್ಯಕ್ತಿಗಳು- ಉತ್ತರಾಖಂಡ ಹೈಕೋರ್ಟ್

ಭಾರತೀಯರ ಪವಿತ್ರ ನದಿ ಗಂಗೆಯನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ಯೋಜನೆ ಕೈಗೆತ್ತಿಕೊಂಡಿರುವಾಗಲೇ, ದೇಶದ ಅತಿದೊಡ್ಡ ನದಿಗಳಾಗಿರುವ ಗಂಗಾ, ಯಮುನಾ ಮತ್ತು ಅವುಗಳ ಉಪನದಿಗಳಿಗೆ ಜೀವಂತ ಅಸ್ತಿತ್ವ ಇದೆ ಅವು ಜೀವಂತ ವ್ಯಕ್ತಿಗಳು ಎಂದು ಉತ್ತರಾಖಂಡ ಉಚ್ಚ ನ್ಯಾಯಾಲಯ ಘೋಷಿಸಿದೆ. ದೇಶದಲ್ಲಿ ನದಿಗಳಿಗೆ ಕಾನೂನುಬದ್ಧ ವ್ಯಕ್ತಿಯ (Legal Person) ಸ್ಥಾನಮಾನ ನೀಡುತ್ತಿರುವ ಮೊದಲ ಪ್ರಕರಣ ಇದಾಗಿದೆ. ನ್ಯೂಜಿಲೆಂಡ್‌ನ ವಾಂಗ್‌ನುಯಿ ನದಿಗೆ ಇಂತಹುದ್ದೇ ಸ್ಥಾನಮಾನ ನೀಡಲು ಅಲ್ಲಿನ ಸಂಸತ್ತು ಕೆಲ ದಿನಗಳ ಹಿಂದಷ್ಟೇ ಅಂಗೀಕರಿಸಿತ್ತು. ನ್ಯೂಜಿಲೆಂಡ್‌ನ ವಾಂಗ್‌ನುಯಿ ನದಿಯ ಸುತ್ತ ನೆಲೆಸಿದ್ದ ಮೇವರಿ ಇವಿ(ಜನಾಂಗ) ಆದಿವಾಸಿಗಳು 'ನಾನೇ ನದಿ; ನದಿಯೇ ನಾನು' ಎನ್ನುವ ಹಾಗೂ ಅಲ್ಲಿನ ಬೆಟ್ಟ, ಗುಡ್ಡ, ನದಿಗಳು ತಮ್ಮ ಪೂರ್ವಜರು ಎಂದು ನಂಬುವವರಾಗಿದ್ದರು. ಬಹಳ ವರ್ಷಗಳಿಂದ ತಮ್ಮ ನದಿಗೆ ವಿಶೇಷ ಸ್ಥಾನಮಾನ ನೀಡಬೇಕೆಂದು ಪಟ್ಟು ಹಿಡಿದಿದ್ದರು. ಜೀವಂತ ವ್ಯಕ್ತಿಯ ಸ್ಥಾನಮಾನ ಪಡೆದ ವಿಶ್ವದ ಮೊದಲ ನದಿ ಅದಾಗಿತ್ತು. ಇದೀಗ ಅಂತಹ ಮಾನ್ಯತೆ ಪಡೆದ ಹಿರಿಮೆಗೆ ಗಂಗಾ, ಯಮುನಾ ಮತ್ತು ಅವುಗಳ ಉಪನದಿಗಳು ಪಾತ್ರವಾಗಿವೆ.

ಗಂಗಾನದಿ 2500 ಕಿ.ಮೀ ಮತ್ತು ಯಮುನಾ 960 ಕಿ.ಮೀ ದೂರ ಹರಿಯುತ್ತದೆ. ಆದರೆ ಇದಕ್ಕೆ ಹೋಲಿಸಿದರೆ ವಾಂಗನುಯಿ ಚಿಕ್ಕದಾಗಿದ್ದು, ಕೇವಲ 290 ಕಿ.ಮೀ. ದೂರದವರೆಗೆ ಕ್ರಮಿಸುತ್ತದೆ. ಗಂಗಾ, ಯಮುನಾ ಮತ್ತು ಅವುಗಳ ಉಪನದಿಗಳಿಗೆ ಉತ್ತರಾಖಂಡ ಹೈಕೋರ್ಟ್ ಜೀವಂತ ವ್ಯಕ್ತಿಯ ಸ್ಥಾನಮಾನ ನೀಡಿರುವುದರಿಂದಾಗಿ ಮಾನವರಿಗೆ ಇರುವ ಹಕ್ಕುಗಳು ಈ ನದಿಗಳಿಗೂ ಲಭ್ಯವಾಗಲಿವೆ. ಒಂದು ವೇಳೆ ಈ ನದಿಗಳನ್ನು ಯಾರಾದರೂ ಮಲಿನಗೊಳಿಸಲು ಯತ್ನಿಸಿದರೆ, ಮಾನವರಿಗೆ ಹಾನಿ ಮಾಡಿದಷ್ಟೇ ಅಪರಾಧ ಎನಿಸಿಕೊಳ್ಳಲಿದೆ. ಈ ನದಿಗಳು ತಮ್ಮ ಹೆಸರಿನಲ್ಲಿ ಕಾನೂನು ಮೊಕದ್ದಮೆ ಹೂಡಬಹುದಾಗಿದೆ. ಜೊತೆಗೆ ಗಂಗಾ, ಯಮುನಾ ನದಿಯನ್ನು ಸ್ವಚ್ಛಗೊಳಿಸಿ, ಉತ್ತಮವಾಗಿ ನಿರ್ವಹಿಸಲು ಗಂಗಾ ಆಡಳಿತ ಮಂಡಳಿಯನ್ನು ಅಸ್ತಿತ್ವಕ್ಕೆ ತರುವಂತೆಯೂ ಉತ್ತರಾಖಂಡ ಸರ್ಕಾರಕ್ಕೆ ನ್ಯಾಯಾಲಯ ಆದೇಶಿಸಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17
FORTNIGHTLY 15-6-2017



# ಕಿಸಾನ್ ಸಂಘ ಮತ್ತು ಬಮುಲ್ ಸಹಯೋಗ – ಹಸಿರು ಹೊದ್ದ ಹಳ್ಳಿ

ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರ ಶ್ರಮದಿಂದ ನೆಲಮಂಗಲ ಸಮೀಪದ ಕೆರೆಕತ್ತಿಗನೂರು ಮೊದಲಾದ ಕೆಲವು ಹಳ್ಳಿಗಳಲ್ಲಿ ಕಾಡು ಬೆಳೆಸುವ ಉತ್ತಮ ಪ್ರಯತ್ನ ನಡೆದಿರುವ ಸಂಗತಿ ಈಗಾಗಲೇ ಪುಂಗವದಲ್ಲಿ ವರದಿಯಾಗಿದೆ. ಆದರೆ, ಈ ಗಿಡಗಳಿಗೆ ಬೇಸಿಗೆಯಲ್ಲಿ ನೀರುಣಿಸುವುದೇ ಒಂದು ಸವಾಲು. ಸುಮಾರು 2,000 ದಷ್ಟಿರುವ ಈ ಗಿಡಗಳಿಗೆ ನೀರು ಹಾಕದಿದ್ದರೆ, ಎಲ್ಲವೂ ಒಣಗಿ ನಿಲ್ಲುತ್ತವೆ. ಮೂರ್‍ನಾಲ್ಕು ವರ್ಷ ಮಾಡಿದ ಪ್ರಯತ್ನವೆಲ್ಲ ವ್ಯರ್ಥ.

ಹಾಗಾಗಿ, ಅವರಿವರ ಬಳಿ ಸಹಾಯ ಪಡೆದು ಟ್ಯಾಂಕರುಗಳಲ್ಲಿ ನೀರು ತಂದು ಹಾಕುವುದು ಕಳೆದ ಒಂದೆರಡು ವರ್ಷಗಳಿಂದ ನಡೆದುಬಂದ ಕ್ರಮ. ಆದರೆ, ಇದು ತ್ರಾಸದಾಯಕವೂ, ಅಧಿಕ ವೆಚ್ಚಕ್ಕೆ ಕಾರಣವೂ ಹೌದು. ಆದರೂ, ಹಾಗೂ ಹೀಗೂ ಮಾಡಿ ಸಂಭಾಳಿಸುತ್ತಿದ್ದರು ಸ್ಥಳೀಯರು ಮತ್ತು ಕಿಸಾನ್ ಸಂಘದ ಕಾರ್ಯಕರ್ತರು.

ಕಿಸಾನ್ ಸಂಘದ ಕಾರ್ಯಕರ್ತರಾದ ಗಂಗಾಧರ್ ಅವರು ಹಾಲು ಉತ್ಪಾದಕರ ಸಂಘಗಳ ಒಕ್ಕೂಟವಾದ ಬಮುಲ್‌ನ ಮುಖ್ಯಸ್ಥರನ್ನು ಒಮ್ಮೆ ಭೇಟಿ ಮಾಡಿ ಕಾಡು ಬೆಳೆಸುವ ತಮ್ಮ ಪ್ರಯತ್ನವನ್ನು ನೋಡಲು ಬರುವಂತೆ ಹೇಳಿದಾಗ ಅವರು ತಮ್ಮ ಕಚೇರಿಯ ಕೆಲವರೊಂದಿಗೆ ಬಂದರು. ಇವರ ಪ್ರಾಮಾಣಿಕ ಪ್ರಯತ್ನ ನೋಡಿ ಬಹಳ ಸಂತೋಷಗೊಂಡ ಅವರು, ತಾವು ಇನ್ನೂ ಕೆಲವು ಸಾವಿರ ಗಿಡ ನೆಡಲು ಬಮುಲ್ ಪ್ರಾಯೋಜಕತ್ವ ನೀಡುವುದಾಗಿ ತಿಳಿಸಿದರು. ಆದರೆ, ಗಿಡ ನೆಡುವುದಕ್ಕಿಂತ ಅವುಗಳನ್ನು 3–4 ವರ್ಷ ಕಾಪಾಡಲು ಇರುವ ಕಷ್ಟವನ್ನು ವಿವರಿಸಿ, ಎಲ್ಲಕ್ಕೂ ಹನಿ ನೀರಾವರಿ ಮಾಡಿಸುವಂತೆ ಅಲ್ಲಿನ ಕಾರ್ಯಕರ್ತರು ಬಮುಲ್ ಮುಖ್ಯಸ್ಥರಿಗೆ ಮನವಿ ಮಾಡಿದರು. ಇದರಿಂದಾಗಿ, ಇಂದು ಅಲ್ಲಿನ 2,000 ಗಿಡಗಳಿಗೆ ಹನಿ ನೀರಾವರಿ ವ್ಯವಸ್ಥೆಯಾಗಿದೆ. ಬೇಸಿಗೆಯಲ್ಲಿ ಗಿಡಗಳು ಒಣಗಿ ಸಾಯುವ ಪ್ರಮೇಯವಿಲ್ಲ. ಇನ್ನು 8–10 ವರ್ಷಗಳಲ್ಲಿ ಅದೊಂದು ಹಸಿರಿನ ಹಳ್ಳಿಯಾಗಲಿದೆ.

ಅಚ್ಚುಕಟ್ಟಾಗಿ ನಡೆದ ಹನಿ ನೀರಾವರಿ ವ್ಯವಸ್ಥೆಯನ್ನು ನೋಡಿ ಖುಷಿಗೊಂಡ ಬಮುಲ್ ಅಧಿಕಾರಿಗಳು ಇನ್ನೂ 5,000 ಗಿಡಗಳನ್ನು ನೆಟ್ಟು ಪೋಷಿಸಲು ಸಹಾಯ ಮಾಡಲು ಉತ್ಸುಕರಾಗಿದ್ದಾರೆ.

# ಕೇಂದ್ರ ಸರ್ಕಾರದ ಪ್ರಾಣಿಹಿಂಸೆ ಪ್ರತಿಬಂಧಕ ನಿಯಮಗಳು ಗೋಹತ್ಯೆಯನ್ನು ನಿಷೇಧಿಸುತ್ತವೆಯೇ?

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ ಕಳೆದ ಮೇ 23ರಂದು ಪ್ರಾಣಿ ಹಿಂಸೆ ಪ್ರತಿಬಂಧಕ ಕಾನೂನು 1960ರ ಸೆಕ್ಷನ್ 38ರ ಅಡಿಯಲ್ಲಿ ಹೊರಡಿಸಿದ 'ಪ್ರಾಣಿ ಹಿಂಸೆ ಪ್ರತಿಬಂಧಕ (ಜಾನುವಾರು ಮಾರುಕಟ್ಟೆ ನಿಯಂತ್ರಣ) ನಿಯಮ 2017'ರ ಅಧಿಸೂಚನೆಯ ನಂತರ ಗೋಹತ್ಯೆ ನಿಷೇಧದ ಪರ ವಿರೋಧ ಚರ್ಚೆಗಳು ಮತ್ತೆ ಚಾಲ್ತಿಗೆ ಬಂದಿವೆ. ಗೋಪ್ರೇಮಿಗಳು ಈ ನಿಯಮಗಳು ಪರೋಕ್ಷವಾಗಿ ಗೋಹತ್ಯೆಯನ್ನು ಪ್ರತಿಬಂಧಿಸುತ್ತವೆ ಎಂದು ಸಂತಸ ವ್ಯಕ್ತಪಡಿಸಿದರೆ ಎಂದಿನಂತೆ ವಿರೋಧಿಗಳು ಆರೆಸ್ಸೆಸ್ ಅಜೆಂಡಾ, ಆಹಾರ ಸಂಸ್ಕೃತಿಯ ಮೇಲೆ ಹೊಡೆತ, ಮುಸ್ಲಿಂ ವಿರೋಧಿ ಇತ್ಯಾದಿಯಾಗಿ ಪ್ರತಿಭಟಿಸುತ್ತಿದ್ದಾರೆ.

ಇಲ್ಲಿ ಹುಟ್ಟುವ ಒಂದು ಪ್ರಶ್ನೆ, ಸಂವಿಧಾನದ 7ನೇ ಶೆಡ್ಯೂಲಿನ ರಾಜ್ಯ ಪಟ್ಟಿಯಲ್ಲಿರುವ 15ನೇ ವಿಷಯ ಜಾನುವಾರುಗಳ ಸಂರಕ್ಷಣೆ, ರಕ್ಷಣೆ ಮತ್ತು ಅಭಿವೃದ್ಧಿ ಹಾಗೂ ಪ್ರಾಣಿಗಳ ರೋಗಗಳನ್ನು ತಡೆಗಟ್ಟುವುದು ರಾಜ್ಯ ಶಾಸಕಾಂಗಕ್ಕೆ ಮೀಸಲಾಗಿರುವುದರಿಂದ ಕೇಂದ್ರ ಸರ್ಕಾರ ಗೋಹತ್ಯೆಯನ್ನು ನಿಷೇಧಿಸುವ ಕಾನೂನು ತರಬಹುದೇ? ಎನ್ನುವುದು. ಈ ಪ್ರಾವಧಾನದ ಅಡಿಯಲ್ಲಿಯೇ ದೇಶದ 24 ರಾಜ್ಯಗಳು ಗೋಹತ್ಯೆಯನ್ನು ಸಂಪೂರ್ಣ ನಿಷೇಧಿಸುವ ಅಥವಾ ಹತ್ಯೆಯನ್ನು ನಿಯಂತ್ರಿಸುವ ಬೇರೆ ಬೇರೆ ರೀತಿಯ ಕಾನೂನುಗಳನ್ನು ಅಂಗೀಕರಿಸಿವೆ. ಆದರೆ, ಸಹವರ್ತಿ ಪಟ್ಟಿಯ 17ನೇ ವಿಷಯದಂತೆ ಪ್ರಾಣಿಹಿಂಸೆಯನ್ನು ತಡಗಟ್ಟಲು ಕಾನೂನು ರೂಪಿಸುವ ಅಧಿಕಾರ ಸಂಸತ್ತಿಗಿದೆ. ಈ ಅಧಿಕಾರವ್ಯಾಪ್ತಿಯ ಆಧಾರದ ಮೇಲೆ ಪ್ರಾಣಿ ಹಿಂಸೆ ಪ್ರತಿಬಂಧಕ ಕಾನೂನು 1960 ರೂಪುಗೊಂಡಿದ್ದು ಅದರಂತೆ ಈಗಿ ನಿಯಮಗಳ ಅಧಿಸೂಚನೆಯನ್ನು ಹೊರಡಿಸಲಾಗಿದೆ.



ಪೀಪಲ್ ಫಾರ್ ಎನಿಮಲ್ಸ್ ಎನ್ನುವ ಸರ್ಕಾರೇತರ ಸಂಸ್ಥೆಯ ಪ್ರಾಣಿ ಹಕ್ಕು ಹೋರಾಟಗಾರ್ತಿ ಗೌರಿ ಮೌಲೇಖಿಯವರು ನೇಪಾಳದ ಗಢಿಮಾಯಿ ಹಬ್ಬದಲ್ಲಿ ಬಲಿನೀಡುವ ಸಲುವಾಗಿ ದೊಡ್ಡ ಸಂಖ್ಯೆಯಲ್ಲಿ ಭಾರತದಿಂದ ದನಗಳನ್ನು ಕಳ್ಳಸಾಗಣೆ ಮಾಡುವುದರ ವಿರುದ್ಧ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ 2016 ಜುಲೈ 12ರ ಅಂತಿಮ ನಿರ್ಣಯದಲ್ಲಿ ಜಾನುವಾರು ಮಾರುಕಟ್ಟೆ, ಕಳ್ಳಸಾಗಣೆ, ಪ್ರಾಣಿಹಿಂಸೆ ತಡೆಯುವುದು ಮೊದಲಾದ ವಿಷಯಗಳಲ್ಲಿ ಈ ಮೇಲೆ ಹೇಳಲಾದ ಪ್ರಾಣಿಹಿಂಸೆ ಪ್ರತಿಬಂಧಕ ಕಾನೂನಿನ ಅಡಿಯಲ್ಲಿ ನಿಯಮಗಳನ್ನು ರೂಪಿಸುವಂತೆ ಸರ್ಕಾರಕ್ಕೆ ಸೂಚನೆ ನೀಡಿತ್ತು. ಅದರಂತೆ ಈ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಸ್ವೀಕರಿಸಿದ ನಂತರ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ಅಧಿಸೂಚನೆ ಹೊರಡಿಸಿತು.

ಈ ನಿಯಮಗಳ ಪ್ರಕಾರ ಆಕಳು ಹಾಗೂ ಎಮ್ಮೆ ಮತ್ತು ಅವುಗಳ ಕರುಗಳು, ಹೋರಿ, ಎತ್ತು, ಕೋಣ, ಒಂಟೆಯನ್ನು ಜಾನುವಾರು ಮಾರುಕಟ್ಟೆಯಲ್ಲಿ ಕಸಾಯಿಖಾನೆಗಳಲ್ಲಿ ಕೊಲ್ಲುವ ಸಲುವಾಗಿ ಅಥವಾ ಬಲಿ ನೀಡುವ ಸಲುವಾಗಿ ಮಾರಾಟ ಮಾಡುವಂತಿಲ್ಲ ಅಥವಾ ಖರೀದಿಸುವಂತಿಲ್ಲ. ಜಾನುವಾರು ಸಂತೆಯಲ್ಲಿ ಕೃಷಿ ಉದ್ದೇಶಕ್ಕಾಗಿ ಮಾತ್ರ ಜಾನುವಾರು ಮಾರಾಟ ಮತ್ತು ಖರೀದಿ ನಡೆಯಬೇಕು. ಇದಲ್ಲದೆ ಜಾನುವಾರುಗಳನ್ನು ಸಾಗಿಸುವಾಗ ಹಿಂಸೆಯಾಗದಂತೆ ನೋಡಿಕೊಳ್ಳಬೇಕು, ಅವುಗಳಿಗೆ ಸಮರ್ಪಕ ನೀರು, ನೆರಳು, ಅಗತ್ಯ ಚಿಕಿತ್ಸೆಯ ವ್ಯವಸ್ಥೆ ಮಾಡಬೇಕು. ಹಾಗೆ ಈ ನಿಯಮಗಳು ಜಿಲ್ಲಾ ಜಾನುವಾರು ಮಾರುಕಟ್ಟ ಉಸ್ತುವಾರಿ ಸಮಿತಿಗಳು, ಜಾನುವಾರು ತಪಾಸಣಾ ಅಧಿಕಾರಿಗಳು, ಪ್ಯಾರಾ–ಪಶುವೈದ್ಯಕೀಯ ಸಿಬ್ಬಂದಿ, ಗಣತಿ ಮಾಡುವವರ ನೇಮಕಾತಿಯ ಅವಕಾಶಗಳನ್ನು ಕಲ್ಪಿಸುತ್ತದೆ,

ನಂತರ ಜಾನುವಾರ ಮಾರಾಟ ನಿಯಂತ್ರಣಕ್ಕೆ ವಿರೋಧ ಬಂದ ಕಾರಣ ಮೇ 27ರಂದು ಕೇಂದ್ರ ಸರ್ಕಾರ ಸ್ಪಷ್ಟೀಕರಣ ನೀಡಿ, ರೈತರು ನೇರವಾಗಿ ಕಸಾಯಿಖಾನೆಗಳಿಗೆ ತಮ್ಮ ಜಾನುವಾರು ಮಾರಾಟ ಮಾಡಲು ಯಾವುದೇ ನಿರ್ಬಂಧ ಇಲ್ಲ ಎಂದು ಹೇಳಿದೆ. ನ್ಯಾಯಾಲದಲ್ಲಿ ಕಾನೂನು ಸಮರವೂ ಆರಂಭಗೊಂಡಿದ್ದು ತಮಿಳುನಾಡು ಹೈಕೋರ್ಟ್‌ನ ಮದುರೈ ಪೀಠ ತಮಿಳುನಾಡಿಗೆ ಅನ್ವಯಿಸುವಂತೆ ನಿಯಮಗಳ ಅನುಷ್ಠಾನಕ್ಕೆ ನಾಲ್ಕು ವಾರಗಳ ತಡೆ ನೀಡಿದೆ. ಜೊತೆಗೆ ಕೇರಳ ಮತ್ತು ರಾಜಸ್ಥಾನ ಹೈಕೋರ್ಟ್‌ಗಳು ತಡೆ ನೀಡಲು ನಿರಾಕರಿಸಿವೆ. ಒಂದು ಹೆಜ್ಜೆ ಮುಂದೆ ಹೋಗಿರುವ ರಾಜಸ್ಥಾನ ಹೈಕೋರ್ಟ್ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು ಎಂದೂ ಹೇಳಿದೆ. ಕೇರಳ, ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳು ಈ ನಿಯಮವನ್ನು ಮಾನ್ಯಮಾಡುವುದಿಲ್ಲ ಎಂದೂ ಬೆದರಿಕೆ ಹಾಕಿವೆ.



# ಭೂತಾನಿನಲ್ಲಿ ಇಂಗಾಲಾಮ್ಲದ ಕೊರತೆ !

ಜಗತ್ತಿನೆಲ್ಲೆಡೆ ಇಂಗಾಲಾಮ್ಲ ಹೊರಸೂಸುವ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು ಜಾಗತಿಕ ತಾಪಮಾಣ ಏರಿಕೆ ಮತ್ತು ಹವಾಮಾನ ಬದಲಾವಣೆಯಿಂದ ವಿಶ್ವವೇ ತಲೆಕೆಡಿಸಿಕೊಂಡಿರುವ ನಡುವೆ, ಈ ದೇಶದಲ್ಲಿ ಇಂಗಾಲಾಮ್ಲದ ಕೊರತೆ ಉಂಟಾಗಿದೆ! ಹೌದು. ಪ್ರತಿ ವರ್ಷ ಭೂತಾನಿನಲ್ಲಿ 1.5 ಮಿಲಿಯನ್ ಟನ್'ನಷ್ಟು ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಆಗುತ್ತದೆ. ಆದರೆ ಇಲ್ಲಿರುವ ಸಸ್ಯ ಸಂಪತ್ತು ಹಾಗೂ ಅರಣ್ಯ 6 ಮಿಲಿಯನ್ ಟನ್‌ಗಳಷ್ಟು ಕಾರ್ಬನ್ ಡೈ ಆಕ್ಸೈಡ್‌ನ್ನು ಹೀರಿಕೊಳ್ಳುತ್ತದೆ. ಇಂದು ಭೂತಾನ್ ವಿಶ್ವದ ಏಕಮೇವ ಕಾರ್ಬನ್ ನೆಗೆಟಿವ್ ದೇಶ ಎನಿಸಿದೆ.

ತನ್ನಲ್ಲಿರುವ ಸ್ವಚ್ಛಂದ ಪ್ರಕೃತಿಯ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರವಾಸಿಗರನ್ನು ಸೆಳೆಯುತ್ತಿರುವ ದೇಶವಿದು. ಇಂತಹ ಭೂತಾನ್ 2014ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ (ಹ್ಯೂಮನ್ ಡೆವಲಪ್'ಮೆಂಟ್ ಇಂಡೆಕ್ಸ್) ಜಗತ್ತಿಗೇ ಮೊದಲ ರಾಷ್ಟ್ರವಾಗಿತ್ತು. ಇದೀಗ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ ಹೊಸ ದಾಖಲೆಯೊಂದನ್ನು ತನ್ನದಾಗಿಸಿಕೊಂಡಿದೆ. ಇದಕ್ಕೆ ಕಾರಣ ಇಲ್ಲಿನ ಜನರಲ್ಲಿ ರಕ್ತಗತವಾಗಿರುವ ಪರಿಸರ ಕಾಳಜಿ ಮತ್ತು ಮರಗಿಡಗಳನ್ನು ಬೆಳೆಸುವಲ್ಲಿರುವ ಆಸಕ್ತಿ. 2015ರ ಜೂನ್ ತಿಂಗಳಲ್ಲಿ ಕೇವಲ 100 ಜನ ಸ್ವಯಂಸೇವಕರು ಒಂದು ಗಂಟೆಯಲ್ಲಿ 49,672 ಗಿಡ ನೆಟ್ಟು ಅದನ್ನು ಬೆಳೆಸಿದರು. ಇದು ವಿಶ್ವ ದಾಖಲೆಯಾಗಿದೆ. 2016ರ ಮಾರ್ಚ್‌ನಲ್ಲಿ ಭೂತಾನಿನ ರಾಣಿಗೆ ಹೆಣ್ಣು ಮಗು ಜನಿಸಿದ್ದಕ್ಕೆ 82 ಸಾವಿರ ಗಿಡ ನೆಟ್ಟು ವಿಶಿಷ್ಟ ರೀತಿಯಲ್ಲಿ ಸಂತೋಷ ವ್ಯಕ್ತಪಡಿಸಿದರು. ಭೂತಾನಿನ 72% ಪ್ರದೇಶ ಕಾಡಿಗೆ ಮೀಸಲಾಗಿದೆ ಅಷ್ಟೇ ಅಲ್ಲದೇ ದೇಶದ ಒಟ್ಟೂ ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶ 60%ಕ್ಕಿಂತ ಕಡಿಮೆಯಾಗಬಾರದು ಎಂದು ಸಂವಿಧಾನದಲ್ಲೇ ವಿಧಿಯನ್ನು ಸೇರಿಸಲಾಗಿದೆ. ಹೀಗೆ, ಪುಟ್ಟ ಭೂಪ್ರದೇಶ, ಕಡಿಮೆ ಜನ ಸಂಖ್ಯೆ ಹೊಂದಿದ್ದರೂ, ತಮ್ಮಲ್ಲಿರುವ ಅಭೇದ್ಯವಾದ ಅರಣ್ಯವನ್ನು ಕಾಪಾಡಿಕೊಳ್ಳುವಲ್ಲಿ ಅತ್ಯಂತ ಮುತುವರ್ಜಿ ವಹಿಸುವ ಭೂತಾನ್, ಪರಿಸರದ ಸಂರಕ್ಷಣೆಯಲ್ಲಿ ಇಡೀ ಜಗತ್ತಿಗೆ ಒಂದು ಮಾದರಿ ದೇಶವೆನಿಸಿದೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.